693

SATYAVADI Oldest Newspaper of Mysore
Daily & Weekly Reg No. M 1299

ಸತ್ಯವಾದಿ

ಸಂಪುಟ 26 ಸಂಚಿಕೆ 297] ಶುಕ್ರವಾರ 7—5—1943 [3 ಪೈ

ಕೆಲವೊಂದು ಸಂಗ್ರಹ

ಲಂಡನ್ನಿನ ಸೈಕರಾಬಾದು ರಸ್ತೆಯಲ್ಲಿ ಜೊಂಬಾಯಿನ ಮಾಜಿ ಗವರ್ನರ್ ಸರ್ ರೋಜರ್ ಲುಂಲಿಯಸ್ಸನ್ನು ನೇಮಕಮಾಡಿರುವಂತೆ ಕಾಣುತ್ತದೆ.

ಕಾಥಿವಾಡಾದಲ್ಲಿ ನುಲೇರಿಯಾ ಜ್ವರ ಹೆಚ್ಚಿರುವದರಿಂದ. ಪ್ರತಿ ದಿವಸವೂ ಜೊಂಬಾಯಿಗೆ ಸುಮಾರು ರೋಗಿಗಳ ಒರ್ತಿರುವರು. ಆದಕ್ಕಾಗಿ. ಅಲ್ಲಿಗೆ ಒರುವ 2 ವರ್ಷ ಮೆಡಿಸ್ಸಿನವರೆಲ್ಲರೂ ಇಕ್ಜಿಕ್ಕ ಹಾಕಿಸಿಕೊಂಡು ಒರಬೇಕೆಂದು ಆಜ್ಞೆ ಮಾಡಲಾಗಿದೆ.

ಜೊಂಬಾಯಿನಲ್ಲಿ 7 ಮತ್ತು 8 ನೇ ತಾರೀಖುಗಳಲ್ಲಿ ಲೇಓಫ್ ಕಾಲ ಫೆಸ್ಟ್ ನಡೆಯುವದು. ಡಾ | ಅಂಬೇಡ್ಕರರು ಅಗತ್ಯ ಸೇವನ್ನು ವಹಿಸುವರು.

ಜೂನ್ 14 ರಲ್ಲಿ ಎಲ್ಲರೂ ಸಂಯುಕ್ತ ಜನಾಂಗದ ದಿನವನ್ನು ಆಚರಿಸಬೇಕೆಂದು ಮಿ॥ ರೂಸ್ವೆಲ್ಟರು ಕೋರಿಯಿತ್ತಾರೆ.

ಫ್ರಾನ್ಸಿಸಲ್ಲಿರುವ ಎಲ್ಲಾ ರಷ್ಯನರೂ ದಸ್ಯಗಿರಿ ಮಾತಲ್ಲಟ್ಟಿರುವರು.

ದಕ್ಷಿಣ ಆಫ್ರಿಕಾಕ್ಕೆ ಪ್ರತಿಕ್ರಿಯೆ ನಡೆಸಲು ಇಂಡಿಯಾದಿಂದ ಗೋಣಿ ಚೀಲ, ಸೆಣಬು ಮುಂತಾದವನ್ನು ಏತಕ್ಕೆ ರವಾನಿಸದೇ ಇರಬಾರದೆಂದು ಭಾರತ ಪ್ರತಿನಿಧಿಗಳು ಕೇಳುತ್ತಾರೆ.

ಮಿ॥ ಚೇನಿಡ್ಡರು ಮಿ | ರೂಸವೆಲ್ಟರ ಖಾಯಂ ಭಾರಿ. ಈಗ ಇವರು ಎರಡನೇ ಸಲ ಮಾಸ್ಕೋವಿಗೆ ಒರವರು. ಇವರೂ ಮಿ॥ ವ್ಹಾಲೆನ್ನರೂ ಏಕಾಂತವಾಗಿ ಮಾತನಾಡಲು ಏರ್ಪಾಡು ಮಾಡಿರುವರಂತೆ, ಆ ಸಮಯದಲ್ಲಿ ಮಿ॥ ಚರ್ಚಿಲರೂ ಅಲ್ಲಿಗೆ ಹೋಗಿ ಸಹಕರಿಸುವ ಯೋಜನೆ ಇದೆಯೆಂತೆ.

ಫ್ರೆಂಚ್ ಜನಾಂಗದ 14 ರಿಂದ 40 ವರ್ಷ ವಯಸ್ಸಿನವರೆಲ್ಲರೂ ಜರ್ಮನಿ ಕಾರ್ಮಿಕರ ಪ್ಯಾಕ್ಟ್ ವೇಲೆ ಜರ್ಮನಿಗೆ ಯಾವ ಷರತ್ತೂ ಇಲ್ಲದೆ ಕಳಿಸಬೇಕೆಂದು ಹಿಟ್ಲರ್ ಆಜ್ಞೆಯನ್ನು ಕೇಳಿರುವದಾಗಿ ಗೊತ್ತಾಗಿದೆ.

ಟಿಹಾರ್ಬಾರ್ ಯುದ್ಧದಲ್ಲಿ ಚೈನಾದವರಿಂದ ಜಪಾನೀಯರು 4000 ಸೈನ್ಯ ತಂದಿದ್ದರೂ ವಿಶೇಷ ನಷ್ಟಪಟ್ಟರು, ಇದಕ್ಕೋಸ್ಕರ ಮತ್ತೆ 20 ಸಾವಿರ ಸೈನ್ಯವನ್ನು ತರಿಸುತ್ತಾರೆ. ಯುದ್ಧವು ರಭಸವಾಗಿ ನಡೆಯುತ್ತಿದೆ.

ಯುದ್ಧವಾರ್ತೆ

ಚಾಮರಾಜನಗರದಲ್ಲಿ ಬೊಂಬಿ

16 ಅಮೆರಿಕ ನೌಕೆಗಳು ಸಿದ್ಧವಾದುವು. ಪರ್ಲ್ ಹಾರ್ಬರ್ ಯುದ್ಧದಾಗಿನಿಂದ ಈ ವರೆವಿಗ 1370 ನೌಕೆಗಳು ಅಮೆರಿಕಾದಲ್ಲಿ ತಯಾರಾದುವು

ಟೋಕಿಯೋನಲ್ಲಿ ರಷ್ಯನ್ ರಾಯಭಾರಿಯು ಜಪಾನಿನ ಹೊಸ ವಿದೇಶೀ ಮಂತ್ರಿಯನ್ನು ನೋಡಿದರು.

ಟ್ಯುನಿಷಿಯಾದಲ್ಲಿ ಟಿಬರ್ಬಾ ಕಡೆ ಏತ್ರ ಸೈನ್ಯಗಳು ಮುಂದೋಡುತ್ತವೆ. ಅಮೆರಿಕ ಸೈನ್ಯವು ಮೆಟ್ಯೂರ್ಸಿಂದ 4 ಮೈಲಿ ಮುಂದೆ ಹೋಗಿದೆ. ಜನರಲ್ 8 ನೇ ಸೇನೆಯು ಮೆಡ್ಜೆಸ್ ಎಲಾಖಾಚ್‌ನಿಂದ ಮುಂದೆ 3 ಮೈಲಿ ಮುಂದೆ ಹೋಗಿದೆ. ಶತ್ರುಗಳ ಪ್ರತಿಘಟನೆ ಜೋರಾಗಿದೆ. ಜಿಸರ್ಟಾವಿಗೆ 10 ಮೈಲಿ ದೂರದಲ್ಲಿ ಫ್ರೆಂಚ್, ಅಮೆರಿಕ ಸೈನ್ಯಗಳು ಬಂದಿವೆ ಶತ್ರುವಿಗೆ ಎಕ್ಸಿಡೆವಿಲೆ-ವಾಂಡ್‌ವಾಷ್‌ನಲ್ಲಿ ಒಡಾಡದ ಹಾಗೆ ನಾಡಿರುವರು. ಪಾಂಡ್-ವಾಷ್ ಸುತ್ತ ಫ್ರೆಂಚ್ ಸೈನ್ಯ ಸುತ್ತುಗಟ್ಟಿದೆ ಮೆಡಿಟರೇನಿಯರ್ನಲ್ಲಿ 18 ಶತ್ರು ನೌಕೆಗಳು ನೀರಿನ ಪಾಲಾದುವು.

ರಷ್ಯಾದಲ್ಲಿ ಕೂಬಾನಿನಲ್ಲಿ ರಷ್ಯರ ಧಾಳಿ ಹೆಚ್ಚಾಗಿದೆ 17 ಮೈಲಿ ವಿಸ್ತಾರದಲ್ಲಿ ಶತ್ರುಸ್ಥಾನ ಭೇದಿಸಿದೆ. ಕ್ರಿಮಿಯಾ ಪಟ್ಟಣ ಹಡಿದಾಗ ಮಾಸ್ಕೋದಲ್ಲಿ ಪ್ರಕಟಣೆ ರಷ್ಯ ಆರ್ಟಿಲರಿ ಮತ್ತು ವಿಮಾನಗಳ ಹಿರಿಮೆ ಆರಕಾರಣ ಕ್ಷೇತ್ರದಲ್ಲಿ ಪುನಃ ಕದನ ಮಾಡುವ ಪ್ರದೇಶದಲ್ಲಿ ಜಪಾನೀಯರು ಸ್ವಲ್ಪ ಮುಂದೆ ಒಂದರು.

ಜಿರಿಲಾ, ಪೆರಿಲಾ ಜೀದಿಗಳಲ್ಲಿ ಬ್ಲಾಕ್ ಔಟ್ ನಿಂತಿದ್ದುದು ಮತ್ತೆ ಮೇರಿಂದ ಜಾರಿಗೆ ಒಂದಿತು.

ಮೇ 5 ರಲ್ಲಿ ಚಾಮರಾಜನಗರದಲ್ಲಿ ಹಿಂದೂಗಳಿಗೂ, ಮುಸಲ್ಮಾನರಿಗೂ ಜಗಳವಾಗಿ ಅನೇಕರಿಗೆ ಪೆಟ್ಟು ಬಿದ್ದಿದೆ ಎಂದು ಗಾಸಿಪುಗಳು ಹಬ್ಬಿದ್ದವು, ಹಲವು ಪುಲಿಸ ವೆದೆಗಳು ಸುಡ್ಡಾಟ್ಟವು. ಈಗ ನಿಗರವು ಹತೋಟಿಯಲ್ಲಿದೆ,

---

ಫ್ರಾನ್ಸಿನಲ್ಲಿ ಅನಾಥರಾಗಿ ದಿಕ್ಕಿಲ್ಲದ 1 ಲಕ್ಷ ಅನಾಥರಿರುವರು.

ಆಕ್ಸಿಯನ್ನು ಒಂದೇ ಸಲ ತೊಳೆಸಬೇಕು ಎರಡು ಸಲ ಯುಕ್ರೇನಿಂದ ಕಾಟ್ಟಿ ತೊಳೆಸಬಾರದು ಎಂದು ಮದರಾಸು ಸರಕಾರವು ಆಜ್ಞೆಯಾಗಿದೆ

ಬರ್ಮಾವು ಮಲೆತಿರುವ ರಣಕ್ಷೇತ್ರ ಪೆಸಿಫಿಕಾರನ್ನು ಸಭೆಯಲ್ಲಿ ಮಿ॥ ಗ್ರೀನ್‌ವಿಲ್ಲರ ಪ್ರಶ್ನೆಗೆ ಮಿ॥ ಚರ್ಚಿಲರು ವೀಗಲೇ ಯುದ್ಧದ ಬಗ್ಗೆ ಹೇಳಿಕೆಯನ್ನು ಹೊರಡಿಸುವುದೆಂದರು.

ಅವೇಲಕಾದವರು ಲೆಂಡ್ ಎಂಡ್ ಲೀಸ್ ಮೇರೆ ಕಳುಹಿಸುತ್ತಿರುವ ಪದಾರ್ಥಗಳು ಮಾರ್ಚ್ ತಿಂಗಳಲ್ಲಿ ಹಾಗೆ ಕಳಹಿಸಿದ್ದಕ್ಕಿಂತ ಬಹಳಷ್ಟಾರಿ, 0 ಮಿಲಿಯನ್ ಟನ್ನು ಬಾಕುವನ್ನು ರಫ್ತಾಗಿದೆ.

ಇಂಡಿಯಾ ಸರ್ಕಾರವರು ಆಸ್ಟ್ರೇಲಿಯನಕ್ಕೆ 4,50000 ಟನ್-ನಷ್ಟು ದವಸಗಳನ್ನು ಸಬಬರಾಯಿ ಮಾಡುವರು

ಅಮೆರಿಕಾದಲ್ಲಿ ಇನ್ನು ಮುಂದೆ ಯಾವ ಕಾರ್ಖಾನೆಯಲ್ಲಾ ಮಾಲೀಕರ ಹಿತಾಸಕ್ತಿ ಕೆಲಸಬಾರದಿದ್ದರೆ ಅಂಥಾ ಕಾರ್ಖಾನೆಯನ್ನು ಸರ್ಕಾರವರೇ ನಡಿಸುವುದೆಲ್ಲದೆ ಕೂಲಿಗಾರರಿಗೆಲ್ಲಾ ಪಡನನ್ನು ಹಾಕುವರು.

ವಿವಿಧ ವರ್ತಮಾನ

ದೆಹಲಿಯನ್ನು ಬಿಟ್ಟು ಹೊರಡುವಾಗ ಡಾ॥ ಎಸ್. ಪಿ. ಮುಖರ್ಜಿಯವರು ಈಗ ಹಿಂದುಗಳು ಕಮ್ಮಿ ಇರುವ ಪ್ರಾಂತ್ಯಗಳಲ್ಲಿ ಡಿಕ್ಕಿ ಒರೆವ ಹಾಗಿದೆ. ಆದ್ದರಿಂದ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕೆಂದರು.

ಲಂಡನ್‌ನಲ್ಲಿ ಇಂಡಿಯಾ ಕ್ಲಬ್ ಎಂಬ ನೂತನ ಸಮಿತಿಯನ್ನು ಭಾರತ ಕ್ಯೋತ್ಸವ ಪ್ರಾರಂಭಿಸಿದರು. ಇದಕ್ಕೆ ಬೇಕಾದ ದ್ರವ್ಯವನ್ನೆಲ್ಲಾ ಭಾರತೀಯರಿಂದಲೆ ವಸೂಲಾಯಿತು. ಈ ಪ್ರಾರಂಭೋತ್ಸವವನ್ನು ಶ್ರೀಮತಿ ಅವರಿಯವರು ನೆರವೇರಿಸಿ, ಇಂಡಿಯಾದಿಂದ ಭಾರತೀಯರಿಗೆ ಇದು ಇಳಿಯುವುದಕ್ಕೂ ತಂಗುವುದಕ್ಕೂ ಅನುಕೂಲವೆಂದು ಹೇಳಿ ಪುಟ್ಟ ಭಾಷಣ ಮಾಡಿದರು

ರೋಟಿ ಫಿಲಂನನ್ನು ಮದರಾಸ್ ಪ್ರಾಂತದಲ್ಲಿ ತೋರಿಸಲಾಗದೆಂದು ಸರ್ಕಾರಿ ಆಜ್ಞೆಯಾಗಿದೆ

ಪ್ರೊಜಾ ಗಣಿಗಳು ಈಗ ಮಿಲಿಟರಿಯವರ ನಡಳಿತದಲ್ಲಿ ಕೆಲಸ ಮಾಡುತ್ತಿವೆ.

ಫಿಕ್ಲಲೆಂಡ್ ಪ್ರೆಸಿಡೆಂಟರನ್ನು ಬಂದುನೋಡುವ ಹಾಗೆ ಹಿಟ್ಲರ ಪತ್ರ ಬರೆದಿರುವನು

ಪೊಲರ ಮೇಲೆ ರಷ್ಯಕ್ಕೆ ಚಳುವಳಿಯನ್ನು ಹೂಡಿರೆಂದು ಆಕ್ಸಿಸ್ ಪ್ರಚಾರ ಮಾಡುತ್ತಿರುವುದು ಶುದ್ಧ ಸುಳ್ಳೆಂದು ರಷ್ಯಾವಲ್ಲಿ ಸರ್ಕಾರವಾಗಿ ಹೇಳಿದೆ

ದಕ್ಷಿಣಪೆಸಿಫಿಕ್‌ನಲ್ಲಿ ಜಪಾನಿಯರ 500 ಟನ್ ನೌಕೆಗಳು ಮುಳುಗಿಸಿ ಮತ್ತೈದು ನೌಕೆಗಳು ಚೇತರಿಸಿಕೊಳ್ಳಲಾರದಷ್ಟು ಏಟನ್ನು ಕೊಟ್ಟರೆಂದು ಸ್ಪಷ್ಟವಾಗಿದೆ

ಪೋಲೆಂಡ್ ಸ್ವತಂತ್ರವಾಗಿರಬೇಕೆಂಬುದೇ ಚರ್ಚಿಲ್ಲರವರ ಅಭಿಪ್ರಾಯವೆಂದು ವಿದೇಶಾಂಗಮಂತ್ರಿ ಮಿ॥ ಆಂಥೋನಿ ಈಡನ್ ಹೇಳಿದರು.

ಭಂಗಾರ ಬೆಳ್ಳಿ ಧಾರಣೆ

ಸವರ್	ರೂ.	66—12—0
ಬಂಗಾರ ಎಲೆ	ರೂ.	95—8—0
ಬೆಳ್ಳಿ	,,	1—7—0

ಫೆಡರಲ್ ಕೋರ್ಟಿನ ತೀರ್ಮಾನ

ಫೆಡರಲ್ ಕೋರ್ಟಿನ ತೀರ್ಮಾನದ ಪ್ರಕಾರ ಕಲ್ಕತ್ತಾ ಹೈ ಕೋರ್ಟಿನವರು ಅನೇಕರನ್ನು ಜೈಲಿನಿಂದ ಬಿಡುಗಡೆ ಮಾಡಿಯಾಗಿದೆ. ಇದಕ್ಕಾಗಿ ಬಂಗಾಳಾ ಸರಕಾರದವರು ಈ ತೀರ್ಪಿನ ವಿರುದ್ಧ ಫೆಡರಲ್ ಕೋರ್ಟಿಗೆ ಅಪೀಲ್ ಮಾಡುವರು

ಫೆಡರಲ್ ಕೋರ್ಟ್ ತೀರ್ಮಾನದ ವೇಳೆ ಅನೇಕರು ಅನೇಕ ಹೈ ಕೋರ್ಟ್‌ಗಳಲ್ಲಿ ದಾವ ಹೂಡಿ ಪರಾಜಿತರಾದರು ಅವರ ಮೇಲೆ ಈಗ ಫೆಡರಲ್ ಕೋರ್ಟ್‌ಗೆ ಅಪೀಲು ಮಾಡಿರುವರು ಫೆಡರಲ್ ಕೋರ್ಟ್ ಛೀಫ್ ಜಡ್ಜಿಯವರು ಪಟ್ಟೇರಾ ಸರು. ಹೊಸದರ ಈಗಲೇ ಒಬ್ಬರು ಪಾರ್ಲಿಗೆಲ್ಲ ಸರ್ ಎ ಪದರಾಚಾರ್ಯರವರ ಈಗ ಚೀಫ್ ಜಸ್ಟಿಸ್ ಆಫ್ ಇಂಡಿಯಾದ ಅನೇಕ ಹೈ ಕೋರ್ಟಿನ ಜಡ್ಜಿಗಳು ಈಗಾಗಲೇ ಇಂತಹ ಮೊಖದ್ದಮೆಗಳಲ್ಲಿ ಭಾಗವಹಿಸಿದ್ದಾರೆ ಅವರು ವಿಚಾರಣೆ ನಡೆಸಿದ್ದರಿಂದಾಗಲ್ಲ. ಇದೆಲ್ಲಾ ನೋಡಿದರೆ ಪುಜಾಬು ಅಥವಾ ಮದರಾಸಿನವರೇ ಒರಿಜಿನಲ್ ಜುರಿಸ್‌ಡಿಕ್ಷನ್ ಕೇಸುಗಳನ್ನು ವಿಚಾರಣೆ ಮಾಡುವರು ಎಂದು ಕಾಣುತ್ತೆ.

ಬಂಗಾಳಾ ಅಡ್ವೊಕೇಟ್ ಜನರಲ್ ಸರ್ಕಾರಿ ಲಾಯರಾಗಿ ಬಂಗಾಳಾದಿಂದ ಬರಬೇಕು. ಇವರು ಈಗ ವೈಸರಾಯ್ ಕೌನ್ಸಿಲ್ಲಿಗೆ ಬರುವದರಿಂದ ಇವರ ಕೆಲಸಕ್ಕೆ ಯಾರೂ ಇನ್ನೂ ನೇಮಕವಾಗಿಲ್ಲ. ಎಲ್ಲಾ ಗೊಂದಲವಾಗಿದೆ.

ಚೈನಾದವರು ಕೋರ್ಟಿನಲ್ಲಿ ಪ್ರತಿಜ್ಞೆ ತೆಗೆದುಕೊಳ್ಳುವದು

ಈಚೆಗೆ ಒಂದು ಬ್ರಿಟಿಷ್ ಕೋರ್ಟಿನಲ್ಲಿ 3 ಚೈನೀಸರಿಗೆ ಪ್ರಾಣ ತೆಗೆದುಕೊಳ್ಳಬೇಕಾಯಿತು. ನವ ಪದ್ಧತಿ ತಪ್ಪಿಯೊಪ್ಪಿಯುವದು ಆದ್ದರಿಂದ 34 ತಪ್ಪಿಗಳನ್ನು ತರಿಸಿರೆಂದರು. ಮ್ಯಾಜಿಸ್ಟ್ರೇಟರು ವ್ಯರ್ಥಾನಷ್ಟವಿದು ಈಗಿನ ಯುದ್ಧದ ಕಾಲದಲ್ಲಿ ಎಂದರು ಜ್ಞನಿಗಳು ಒಪ್ಪಲಿಲ್ಲ. ಮ್ಯಾಜಿಸ್ಟ್ರೇಟರು ಎರಡ ತಪ್ಪಿಯನ್ನು ಕೊಡಲಾಗುವದು ಅದನ್ನೆ 34 ಮುಂದಿಯೂ ಉಪಯೋಗಿಸಿರೆಂದರು. ಇದೂ ಆಗಲಾರದೆಂದು ಹೇಳಿದರು. ಈಗ ತಪ್ಪಿಗಳ ವಿಭಾವವಾಗಿರುವ ಕಾರಣ ಪ್ರತಿಯೊಬ್ಬರು ಒಂದು ಬಮುಕಿರುವ ಕೋಳಿಯ ಕತ್ತನ್ನು ಕಿವಿಚಬಹುದೆಂದು ದ್ವಿಭಾಷಿಯು ಹೇಳಿದನು. ಕೋರ್ಟಿನವರು ಒಪ್ಪಲಿಲ್ಲ. ಬಲಗೈ ಎತ್ತುವ ಪದ್ಧತಿಯನ್ನು ಜಾರಿಗೆ ತಂದರು

ಆಸ್ಫೋಟನೆ

ಅಮೇರಿಕಾದ ಎಲ್‌ಕ್ಯಾನಲ್ಲಿ ಒಂದು ಭೀಕರ ಸಿಡಿತವಾಗಿ 20 ಕೂಲಿಗಾರರು ತಕ್ಷಣ ಮೃತಪಟ್ಟರು. 100 ರವರಿಗೆ ಘಾಯವಾಗಿದೆ. ಬೆಂಕಿ ಪತ್ತಿದ್ದನಿಂದ 6 ಬಂಗಲೆಗಳು ನಾಶವಾದವು.

ಕನ್ನಡ ನಾಟಕಗಳ ನವರಾತ್ರೋತ್ಸವ

ಮೈಸೂರು ನಾಟಕ ಸಂಘದವರು ಈ ತಿಂಗಳು 8 ನೇ ಶನಿವಾರದಿಂದ 17 ನೇ ಸೋಮವಾರ ಪೂರ್ತಿಯಾಗಿ ಮೈಸೂರು ಟೌನ್‌ಹಾಲಿನಲ್ಲಿ ನಾಟಕ ಪ್ರದರ್ಶನಗಳ ಸ್ಪರ್ಧೆಯನ್ನು ಏರ್ಪಡಿಸಿರುತ್ತಾರೆ. ಈ ಸ್ಪರ್ಧೆಯಲ್ಲಿ 11 ನಾಟಕ ಸಂಸ್ಥೆಗಳು ಭಾಗವಹಿಸಿವೆ.

ವಾರ್ಷಿಕ ಸಮ್ಮೇಳನ

ಮೈಸೂರು ದೇಶೀಯ ವರ್ತಕರ ಸ್ವರಾಜ್ಯ ಸಂಘದ ದ್ವಿತೀಯ ವಾರ್ಷಿಕ ಸಮ್ಮೇಳವು ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು ಶ್ರೀ ಕೃಷ್ಣಾನಂದ ವಸತಿಯಲ್ಲಿ, ಶ್ರೀ ಜಗದ್ಗುರು ಅಭಿನವ ಸಚ್ಚಿದಾನಂದತೀರ್ಥಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆಯುವುದೆಂದೂ ಅನೇಕ ಮಹಾಶಯರೆಲ್ಲರೂ ಬಂದು ಈ ಸಮ್ಮೇಳನದಲ್ಲಿ ಭಾಗವಹಿಸಬೇಕೆಂದೂ ಕಾರ್ಯದರ್ಶಿಗಳು ಕೋರಿರುತ್ತಾರೆ.

ಉಪನಯನ ಮಹೋತ್ಸವ

ಶ್ರೀ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಸ್ಕೂಲಿನ ಅಧ್ಯಾಪಕರಾದ ಶ್ರೀ ಸಿ. ವಿ. ರಾಮಸ್ವಾಮಿಯವರು, ಈ ದಿವಸ ಬೆಳಿಗ್ಗೆ ತಮ್ಮ ಪುತ್ರ ಚಿ || ರಂಗಸ್ವಾಮಿಗೂ, ಮತ್ತು ತಮ್ಮ ಸೋದರಳಿಯ ಶ್ರೀ ಶಿವರಾಮಯ್ಯನವರ ಪುತ್ರ ಚಿ || ಸತ್ಯನಾರಾಯಣನಿಗೂ ಬ್ರಹ್ಮೋಪದೇಶವನ್ನು ವೈಭವದಿಂದ ನೆರವೇರಿಸಿದರು.

ವಿವಾಹ ಮಹೋತ್ಸವ

ಹಾಸನದ ಪ್ಲೀಡರ್ ಶ್ರೀ ಬೆಳಕವಾಡಿ ಸೂರ್ಯನಾರಾಯಣರಾಯರು ತಮ್ಮ ದೊಡ್ಡಪ್ಪ ಬೆಳಕವಾಡಿ ಲಕ್ಷ್ಮೀನಾರಾಯಣಪ್ಪನವರ ಮಗ ಶ್ರೀ ಜಿ. ಸುಬ್ರಹ್ಮಣ್ಯಯ್ಯನವರ ಪುತ್ರಿ ಚಿ || ಸೌ || ಗುಂಡಮ್ಮನನ್ನು ಹಾಸನದ ಪ್ಲೀಡರ್ ಶ್ರೀ ಎಸ್. ಆರ್. ಶ್ರೀಕುಂಠಯ್ಯನವರ ಪುತ್ರ ಪ್ಲೀಡರ್ ಚಿ || ಸಂಜುಂಡಯ್ಯನವರಿಗೆ ಕೊಟ್ಟ ವಿವಾಹ ಮಹೋತ್ಸವನ್ನು ಮೈಸೂರಿನಲ್ಲಿ ಶ್ರೀ ಸುಬ್ರಹ್ಮಣ್ಯಯ್ಯನವರ ಮಾವಂದಿರಾದ ಮು || ರಾ || ಬಿ. ಕೆ. ಸಬ್ಬರಾಯರ ಮನೆಯಲ್ಲಿ ವಿಜೃಂಭಣೆಯಿಂದ ನೆರವೇರಿಸಿದರು

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ಮಾಣಿ ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಜರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮನೆ ಕೋಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ, ಧನಭಾಗ್ಯಂ ಎ. ನಾರಾಯಣರಾವ್, ಕ. ಎಂ ಮುಖದೇವಕ, ಮಾಸ್ಟರ್ ಬಿ. ವಿ. ಕೆ. ಮೂರ್ತಿ ಮುಂತಾದವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು — ಜಿ. ಆರ್. ರಾಮಯ್ಯನವರು

ಸಂಗೀತ ನಿರ್ದೇಶಕರು — ಸಂಗೀತರತ್ನ ಟಿ. ಚೌಡಯ್ಯನವರು

ತಯಾರಿಕೆ — ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ

ಕಥಾ ವಸ್ತು ದಿಗ್ದರ್ಶಕರು — ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋವಾಲ್.

ಸಪ್ಲೈಯರ್ಸ್ — ಸೆಂಟ್ರಲ್ ಸ್ಟುಡಿಯೋಸ್ ಲಿಮಿಟೆಡ್, ಕೊಯಮತ್ತೂರು

For All Kinds of Printing & Binding

The Satyavadi Press

Chamarajapuram
Mysore

ಶಕ್ತಿ ಸಾಧನೆಗೆ
ಸುಲಭೋಪಾಯವು

ಶಕ್ತಿಸುಧಾ

ಸೇವನೆ ಎಂಬುವುದು

ನಿಮ್ಮ ಜ್ಞಾಪಕದಲ್ಲಿರಲಿ

ಸತ್ಯವಾದಿ ಪತ್ರಿಕೆಗೆ
ಚಂದಾದಾರರಾಗಿರಿ

ಅಕ್ಕರ

ಸಾಮಾಜಿಕ
ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಪುಟಕ್ಕೆ ಕೂಡ ವಿಳಂಬ ಮನಸ್ಸಾಗುವದಿಲ್ಲ. ಬೆಲೆ 6 ಆಣೆ. ಪೋಸ್ಟೇ. ಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್ ಮೈಸೂರು

SHAKTI SUDHA

A Panacea for All Debilites

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

2 ನೆಯ ಯಶಸ್ವಿ ವಾರ

Opera — Saheli

ಅಪೆರಾ ಸಹೇಲಿ

ಪಂಡರೀಬಾಯಿ, ರತ್ನಾಬಾಯಿ, ಪ್ಯಮಿಳ ಯಾಕೂಬ್ ಮುಂತಾದವರು ನಟಿಸಿರುವರು

ಪಿ. ಮಂಜಪ್ಪ ಮರ್ಚೆಂಟ್
ಹಳೇ ಅಗ್ರಹಾರ, ಮೈಸೂರು.
ಇವರಲ್ಲಿ 'ಸತ್ಯವಾದಿ' ಪಡೆಯಬಹುದು

Edited, Printed & published by M. S. Krishna Rao, at the Satyavadi Press. Chamaraja Agrahar, Mysore.